# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## ಚುಕ್ಕೆ ರಹಿತ ಪ್ರಶ್ನೆ

ದಿನಾಂಕ : 18-03-2021 ಪ್ರಶ್ನೆ ಸಂಖ್ಯೆ : 1317(1627)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಸಿ. ಎಂ. ಇಬ್ರಾಹಿಂ(ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 18-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ಅರ್ಕಾವತಿ ಬಡಾವಣೆ ವಿನ್ಯಾಸ ಕುರಿತು

(ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವತಿಯಿಂದ ಕೈಗೊಂಡಿರುವ ಅರ್ಕಾವತಿ ಬಡಾವಣೆ ನಿರ್ಮಾಣ ಕಾರ್ಯ ಪ್ರಸ್ತುತ ಯಾವ ಹಂತದಲ್ಲಿದೆ;

(ಆ) ಅರ್ಕಾವತಿ ಬಡಾವಣೆಯ ವಿನ್ಯಾಸವನ್ನು ವಿಸ್ತರಿಸಲು ರಾಜ್ಯ ಸರ್ಕಾರವು ಅನುಮತಿ ನೀಡಿದೆಯೇ; ಹಾಗಿದ್ದಲ್ಲಿ, ಹೊಸ ವಿನ್ಯಾಸ ವಿಸ್ತರಣೆಯು ಪ್ರಾಥಮಿಕವಾಗಿ ಡಿನೋಟಿಫಿಕೇಷನ್ ಮತ್ತು ಭೂ-ನಷ್ಟದಿಂದಾಗಿ ಸೈಟ್‌ಗಳನ್ನು ಕಳೆದುಕೊಂಡಿರುವ ಹಂಚಿಕೆದಾರರಿಗೆ ಮತ್ತು ರೈತರಿಗೆ ಸಿಗಲಿರುವ ಪ್ರಯೋಜನ ಏನು;

(ಇ) ಸರ್ಕಾರವು ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ ಈ ಹಿಂದೆ ಎಷ್ಟು ವಿನ್ಯಾಸಗಳನ್ನು ಅಂಗೀಕರಿಸಿ ಅನುಮತಿ ನೀಡಲಾಗಿತ್ತು; (ಅಂಗೀಕೃತ ವಿನ್ಯಾಸಗಳ ಸಂಪೂರ್ಣ ಮಾಹಿತಿ ಒದಗಿಸುವುದು) ಹಿಂದೆ ಅನುಮತಿಸಿದ ವಿನ್ಯಾಸಕ್ಕೂ ಮಾನ್ಯತೆ ಇರುತ್ತದೆಯೇ;

(ಈ) ಬಡಾವಣೆ ಕಾಮಗಾರಿಯನ್ನು ಸಂಪೂರ್ಣಗೊಳಿಸಲು ಸರ್ಕಾರವು ಕಾಲಮಿತಿ ನಿಗದಿ ಮಾಡಿದೆಯೇ?